**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ</u>**

**<u>ಸಿಸಿ ನಂಃ 5587/2021</u>**

ಪಿರ್ಯಾದಿಃ- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ದ-

ಆರೋಪಿತರುಃ- ಗೋವಿಂದ ಭೀಮಪ್ಪ ಬಂಗಾರಿ
ವಯಾಃ 25 ವರ್ಷ,
ಸಾಃ ತಡಸಿನಕೊಪ್ಪ ಗೌಡರ ಓಣಿ, ಧಾರವಾಡ.

**<u>ದೋಷಾರೋಪಣೆ</u>**

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆ ಃ-

ಮೊದಲನೇಯದಾಗಿ, ಧಾರವಾಡದ ವಿದ್ಯಾಗಿರಿ ಪೋಲಿಸ್ ಠಾಣೆಯ ಹದ್ದಿಯಲ್ಲಿ ಬರುವ ಟೋಲನಾಕಾ ಹತ್ತಿರ ಇರುವ ಬ್ಯಾಂಕ್ ಆಫ್ ಬರೋಡಾ (ವಿಜಯಾ ಬ್ಯಾಂಕ) ಹತ್ತಿರ , ದಿಃ 10-06-2021 ರಂದು ಮಃ 15.15 ಗಂಟೆಗೆ ಫಿರ್ಯಾದುದಾರರು ತಮ್ಮ ಊರಾದ ಯಲ್ಲಾಪುರಕ್ಕೆ ಹೋಗುವಾಗ ಅಲ್ಲಿ ಯಾವುದಾದರೂ ವಾಹನದಲ್ಲಿ ಏರಿಕೊಪ್ಪ ಬೈಪಾಸವರೆಗೆ ಡ್ರಾಪ ತೆಗೆದುಕೊಳ್ಳುವ ಸಲುವಾಗಿ ನಿಂತಾಗ, ಆರೋಪಿತನಾದ ನೀನು ಕಪ್ಪು ಬಣ್ಣದ ಹೀರೋ ಹೆಚ್ . ಎಫ್ . ಡಿಲೆಕ್ಸ ಮೋಟರ್ ಸೈಕಲ್ ನಂಃ KA-25/HD-5524 ದ್ವಿಚಕ್ರ ವಾಹನದ ಮೇಲಿಂದ ಬಂದು ಫಿರ್ಯಾದಿಯ ಹತ್ತಿರ ಬಂದು ಎಲ್ಲಿಗೆ ಹೋಗಬೇಕು ಅಂತಾ ವಿಚಾರಿಸಿ ನಾನು ಏರಿಕೊಪ್ಪದವರೆಗೆ ಹೋಗುತ್ತೇನೆ ಅಲ್ಲಿಯವರೆಗೆ ಡ್ರಾಪ್ ಕೊಡುವುದಾಗಿ ಹೇಳಿ ಅವರನ್ನು ನಂಬಿಸಿ ನಿನ್ನ ಮೋಟರ್ ಸೈಕಲ್ ಹತ್ತಿಸಿಕೊಂಡು ಏರಿಕೊಪ್ಪ ಬೈಪಾಸ ಬ್ರಿಡ್ಜವರೆಗೆ ಹೋಗಿ ಫಿರ್ಯಾದಿದಾರನನ್ನು ಬೈಕನಿಂದ ಇಳಿಸಿ ನಿನ್ನಲ್ಲಿದ್ದ ಹಣ ಕೊಡು ಎಂದು ಹೆದರಿಸಿ ಫಿರ್ಯಾದಿಯ ಶರ್ಟಿನ ಕಿಸೆಯಲ್ಲಿದ್ದ ರೂ.5,000/- ನಗದು ಹಣವನ್ನು ಹಾಗೂ ಅವರ ಪ್ಯಾನಕಾರ್ಡ ಝುರಾಕ್ಸ ಪ್ರತಿಯನ್ನು

ಜಬರದಸ್ತಿಯಿಂದ ದೋಚಿಕೊಂಡು ಹೋಗಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 392** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀ?

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು, ಫಿರ್ಯಾದಿದಾರನಿಗೆ ನಿಮ್ಮ ಕೈಯಿಂದ ಕಪಾಳಕ್ಕೆ ಹೊಡೆದು ನೋವುಪಡಿಸಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 323** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತಿರಿ?

ಮೂರನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು, ಫಿರ್ಯಾದಿಗೆ ಹೊಡೆದಾಗ ಪಿರ್ಯಾದಿದಾರ ನಿನ್ನನ್ನು ಹೆದರಿ ಓಡಿ ಹೋಗುವಾಗ , ನೀನು ನಿನ್ನ ಮೋಟರ್ ಸೈಕಲ್ ಮೇಲೆ ಹೋಗಿ ಪಿರ್ಯಾದಿದಾರನಿಗೆ ಅಡ್ಡಗಟ್ಟಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 341** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತಿರಿ?

ಕೊನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು, ಫಿರ್ಯಾದಿದಾರರನ್ನು ನಿನ್ನ ಬೈಕನಿಂದ ಕೆಳಗೆ ಇಳಿಸಿ ನಿನ್ನಲ್ಲಿದ್ದ ಹಣವನ್ನು ಕೊಡು ಅಂತಾ ಪಿರ್ಯಾದಿಗೆ ಬೆದರಿಕೆ ಹಾಕಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 506** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತೀರಿ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಯಾದ ನೀನು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು .)

**ಧಾರವಾಡ** **ಸಹಿ/-**

**ದಿನಾಂಕಃ 12-09-2022** **(ಮಹೇಶ ಚಂದ್ರಕಾಂತ)**

**3 ನೇ  ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ**
**ನ್ಯಾಯಾಲಯ, ಧಾರವಾಡ.**

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಧಾರವಾಡ.</u>**

**<u>ಸಿಸಿ ನಂಃ 5587/2021</u>**

ಫಿರ್ಯಾದಿಃ-  ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ  ಪೋಲಿಸ್ ಠಾಣೆ)

**-ವಿರುದ್ಧ-**

ಆರೋಪಿತಃ-  ಗೋವಿಂದ ಭೀಮಪ್ಪ ಬಂಗಾರಿ

**<u>ಃ ಆಪಾದನೆಃ</u>**

ಪ್ರಶ್ನೆಃ  ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?
ಉತ್ತರ ಃ ತಿಳಿಯಿತು.

ಪ್ರಶ್ನೆಃ  ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ , ವಿಚಾರಣೆ ಆಗಬೇಕು.

(ಮೇಲಿನ ಉತ್ತರವನ್ನು ಆರೋಪಿತನ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

**ಧಾರವಾಡ.**
**ದಿನಾಂಕಃ 12-09-2022**

**ಸಹಿ/-**
**3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ, ಧಾರವಾಡ.**

**ಆರೋಪಿತನ ಸಹಿ**